ಬಳಕೆ ಮಾಡಿ ವ್ಯವಸಾಯ ಮಾಡಲು ಅನುಕೂಲವಾಗುವಂತೆ ಸಬ್ಸಿಡಿ ದರದಲ್ಲಿ ಸೀಮೆಎಣ್ಣೆಯನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು)

ಅ) ಕೃಷಿ ಇಲಾಖೆಯಲ್ಲಿ ಇಂತಹ ಯಾವುದೇ ಕಾರ್ಯಕ್ರಮ ಈವರೆಗೆ ಜಾರಿಯಲ್ಲಿರುವುದಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಈ ವಿಷಯವು ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿಲ್ಲ

701 (982) ಶ್ರೀ ಪದ್ಮನಾಭ ಕೊಟ್ಟಾರಿ ಕೆ (ವಿಟ್ಲ) – ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಡುಗೆ ಅನಿಲ ಸರಬರಾಜಿನ ಕೊರತೆ ಪ್ರಮಾಣ ಎಷ್ಟು, ಅದನ್ನು ಪರಿಹರಿಸಲು ಸರ್ಕಾರದ ಕ್ರಮಗಳೇನು ,

ಆ) ರಾಜ್ಯಕ್ಕೆ ಪ್ರಸ್ತುತ ಪಡಿಸಿರುವ ಅಡುಗೆ ಅನಿಲದ ಪ್ರಮಾಣ ಮತ್ತು ಅದರ ಸರಬರಾಜಿನ ವಿವರಗಳೇನು ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

ಅ) ಕೇಂದ್ರ ಸರ್ಕಾರದ ಸ್ವಾಮ್ಯದ ತೈಲ ಕಂಪನಿಗಳಾದ ಇಂಡಿಯನ್ ಆಯಿಲ್ ಕಾರ್ಪೊರೇಷನ್, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಮತ್ತು ಹಿಂದುಸ್ಥಾನ್ ಪೆಟ್ರೋಲಿಯಂ ಕಾರ್ಪೊರೇಷನ್‌ಗಳಿಂದ ರಾಜ್ಯದಾದ್ಯಂತ ಅಡುಗೆ ಅನಿಲದ ಸಿಲಿಂಡರ್‌ಗಳು ಸರಬರಾಜಾಗುತ್ತಿವೆ ದಿನಾಂಕ 1 4 2006 ರಿಂದ 31 1 2007 ರ ಅಂತ್ಯಕ್ಕೆ ಇಂಡಿಯನ್ ಆಯಿಲ್ ಕಾರ್ಪೋರೇಷನ್ ರವರಿಂದ ಸಂಚಿತ ಒಟ್ಟು 13741268 ಅನಿಲ ಸಿಲಿಂಡರ್‌ಗಳ ಬೇಡಿಕೆ ಇದ್ದು 13715423 ಅನಿಲ ಸಿಲಿಂಡರ್‌ಗಳು ಸರಬರಾಜಾಗಿದ್ದು, ಒಟ್ಟು 25 845 ಅನಿಲ ಸಿಲಿಂಡರ್‌ಗಳ ಕೊರತೆಯಾಗಿರುತ್ತದೆ ಒಟ್ಟು ಹತ್ತು ತಿಂಗಳ ಅವಧಿಯ ಅಂತ್ಯಕ್ಕೆ ಹೆಚ್ ಪಿ ಸಿ ಮತ್ತು ಬಿ ಪಿ ಸಿ ತೈಲ ಕಂಪನಿಗಳಿಂದ ಬೇಡಿಕೆ ಮೀರಿ ಅನಿಲ ಸರಬರಾಜಾಗಿರುತ್ತದೆ ಆದರೆ, ಬಿ ಪಿ ಸಿ ತೈಲ ಕಂಪನಿಗಳಿಂದ ಸೆಪ್ಟೆಂಬರ್ ಹಾಗೂ ಅಕ್ಟೋಬರ್ 2006ರ ಮಾಹೆಗಳಲ್ಲಿ ಒಟ್ಟು 1595071 ಅನಿಲ ಸಿಲಿಂಡರ್‌ಗಳ ಬೇಡಿಕೆ ಇದ್ದು 1505915 ಸಿಲಿಂಡರ್ ಸರಬರಾಜು ಮಾಡಿದ್ದು

ಒಟ್ಟು 89156 ಸಿಲಿಂಡರ್‌ಗಳು ಕೊರತೆಯಾಗಿರುತ್ತದೆ ಅದೇ ರೀತಿ ಹೆಚ್ ಪಿ ಸಿ ತೈಲ ಕಂಪನಿಯಿಂದ ಆಗಸ್ಟ್ ಮತ್ತು ನವೆಂಬರ್ ಮಾಹೆಗಳಲ್ಲಿ ಒಟ್ಟು 2679014 ಸಿಲಿಂಡರ್‌ಗಳ ಬೇಡಿಕೆ ಇದ್ದು ಒಟ್ಟು 2651177 ಸಿಲಿಂಡರ್‌ಗಳು ಸರಬರಾಜಾಗಿದ್ದು, ಒಟ್ಟು 27887 ಸಿಲಿಂಡರ್ ಕೊರತೆಯಾಗಿರುತ್ತದೆ ಈ ಕೊರತೆಯನ್ನು ನಂತರದ ತಿಂಗಳುಗಳಲ್ಲಿ ನಿವಾರಿಸಲಾಗಿದೆ ಒಟ್ಟಾರೆ ಹಾಲಿ ಅಡುಗೆ ಅನಿಲ ಬೇಡಿಕೆಗನುಗುಣವಾಗಿ ಸರಬರಾಜಾಗುತ್ತಿದೆ

ಮೇಲೆ ತಿಳಿಸಿದ ಮಾಹೆಗಳಲ್ಲಿ ಅಡುಗೆ ಅನಿಲದ ಸರಬರಾಜಿನ ಕೊರತೆಗೆ, ಮಂಗಳೂರು ನಗರದಲ್ಲಿ ನಡೆದ ಗಲಭೆ ಹಾಗೂ ಮಂಗಳೂರು–ಬೆಂಗಳೂರು ಹೆದ್ದಾರಿಯ ರಸ್ತೆಯು ತೀವ್ರ ಹದಗೆಟ್ಟಿರುವುದು ಮುಖ್ಯ ಕಾರಣವಾಗಿರುತ್ತದೆ ಈ ಕೊರತೆ ನೀಗಿಸುವಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ

1 ಬಿ ಪಿ ಸಿ ಮತ್ತು ಹೆಚ್ ಪಿ ಸಿ ತೈಲ ಕಂಪನಿಗಳಿಂದ ಅಡಿಗೆ ಅನಿಲ ಕೊರತೆಯಾದ ಸಿಲಿಂಡರ್‌ಗಳನ್ನು ತಾತ್ಕಾಲಿಕವಾಗಿ ಇಂಡಿಯನ್ ಆಯಿಲ್ ಕಾರ್ಪೊರೇಷನ್‌ರವರಿಂದ ಭರಿಸಲು ಕ್ರಮ ಕೈಗೊಳ್ಳಲಾಗಿದೆ

2 ಹೆಚ್ ಪಿ ಸಿ ತೈಲ ಕಂಪನಿಯವರು ಪರ್ಯಾಯ ವ್ಯವಸ್ಥೆಯಾಗಿ ತಮ್ಮ ಆಂಧ್ರ ರಾಜ್ಯದ ಚೆರ್ಲಾಪಲ್ಲಿಯಲ್ಲಿನ ಅಡುಗೆ ಅನಿಲ ಘಟಕದಿಂದ ಕೊರತೆಯಿದ್ದ ಸಿಲಿಂಡರ್‌ಗಳನ್ನು ಪಡೆದು ಕರ್ನಾಟಕದ ಗ್ರಾಹಕರಿಗೆ ಸರಬರಾಜು ಮಾಡಿರುತ್ತಾರೆ

3 ಕರ್ನಾಟಕ ರಾಜ್ಯದಲ್ಲಿ ತೈಲ ಕಂಪನಿಗಳಿಂದ ಸ್ಥಾಪಿತವಾದ ಎಲ್ಲಾ 11 ಎಲ್ ಪಿ ಜಿ ಬಾಟ್ಲಿಂಗ್ ಯೂನಿಟ್‌ಗಳನ್ನು ಎಲ್ಲಾ ರಜಾ ದಿನಗಳಲ್ಲಿಯೂ ಸಹ ಹಾಗೂ ಇತರೇ ದಿನಗಳಲ್ಲಿ ನಿಗದಿಗಿಂತ ಹೆಚ್ಚಿನ ಅವಧಿಯಲ್ಲಿ ಕಾರ್ಯ ನಿರ್ವಹಿಸುವಂತೆ ಸೂಚಿಸಿದೆ

4 ನೆರೆ ರಾಜ್ಯಗಳಿಂದ ರೈಲುಗಳ ಮೂಲಕ ಅಡುಗೆ ಅನಿಲ ಸಿಲಿಂಡರ್‌ಗಳನ್ನು ತರಿಸಿ ಕರ್ನಾಟಕ ರಾಜ್ಯದಲ್ಲಿ ವಿತರಿಸಲಾಗಿದೆ

5 ತೈಲ ಕಂಪನಿಗಳು ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಅಧಿಕಾರಿಗಳನ್ನೊಳಗೊಂಡಂತೆ ಜಂಟಿ ಕಾರ್ಯಚರಣೆಯನ್ನು ನಡೆಸಿ ಅಡುಗೆ ಅನಿಲದ ಸಿಲಿಂಡರ್‌ಗಳನ್ನು ವಾಣಿಜ್ಯ ಮಳಿಗೆಗಳಲ್ಲಿ ಉಪಯೋಗಿಸುತ್ತಿರುವ ಬಗ್ಗೆ ದಾಳಿ ನಡೆಸಲಾಗಿದೆ ಈ ರೀತಿಯ

ತಪ್ಪಿತಸ್ಥ ವಾಣಿಜ್ಯ ಮಳಿಗೆಗಳ ವಿರುದ್ಧ ಅನೇಕ ಪ್ರಕರಣಗಳನ್ನು ದಾಖಲು ಮಾಡಿರುವುದು ಅಡುಗೆ ಅನಿಲದ ದುರುಪಯೋಗಕ್ಕೆ ತಡೆಯುಂಟು ಮಾಡಿರುತ್ತದೆ

6 ಸಾರಿಗೆ ಇಲಾಖೆಯ ಅಧಿಕಾರಿಗಳೂ ಸಹಾ ವಾಹನಗಳಲ್ಲಿ ಅಡುಗೆ ಅನಿಲದ ದುರುಪಯೋಗ ಆಗುತ್ತಿರುವ ಬಗ್ಗೆ ಕಾರ್ಯಾಚರಣೆ ನಡೆಸುತ್ತಿದ್ದಾರೆ ಇದಲ್ಲದೆ ಆಟೋರಿಕ್ಷಾಗಳು ಸರ್ಕಾರದಿಂದ ಮಾನ್ಯತೆ ಪಡೆದ ಆಟೋ ಎಲ್‌ಪಿಜಿ ಕಿಟ್‌ಗಳನ್ನು ಅಳವಡಿಸಿಕೊಳ್ಳಲು ರಾಜ್ಯ ಸರ್ಕಾರದಿಂದ ಸಬ್ಸಿಡಿ ನೀಡಲಾಗುತ್ತಿದೆ

ಆ) ಕರ್ನಾಟಕ ರಾಜ್ಯದಾದ್ಯಂತ ಸಾರ್ವಜನಿಕ ತೈಲ ಕಂಪನಿಗಳಿಂದ ಸ್ಥಾಪಿತವಾದ ಸುಮಾರು 400 ಟಿಎಮ್‌ಟಿ ಸಾಮರ್ಥ್ಯವುಳ್ಳ ಒಟ್ಟು 11 ಎಲ್‌ಪಿಜಿ ಬಾಟ್ಲಿಂಗ್ ಯೂನಿಟ್‌ಗಳು ಕಾರ್ಯನಿರ್ವಹಿಸುತ್ತಿವೆ ಮಾಹೆಯಾನ 49000 ಮೆಟನ್‌ಗಳ ಅಡುಗೆ ಅನಿಲದ ಬೇಡಿಕೆಯಿರುತ್ತದೆ ಮೇಲೆ ತಿಳಿಸಿದಂತೆ ಕರ್ನಾಟಕ ರಾಜ್ಯದಲ್ಲಿ ಸ್ಥಾಪಿತವಾದ ಬಾಟ್ಲಿಂಗ್ ಯೂನಿಟ್‌ಗಳಿಂದಲೇ ಪೂರ್ಣ ಬೇಡಿಕೆಯನ್ನು ಪೂರೈಸಲಾಗುತ್ತಿದೆ ಪ್ಯಾಕ್ ಮಾಡಿದ ಅಡುಗೆ ಅನಿಲದ ಸಿಲಿಂಡರ್‌ಗಳನ್ನು ಸಾರ್ವಜನಿಕ ತೈಲ ಘಟಕಗಳ 489 ಅಧಿಕೃತ ಎಲ್‌ಪಿಜಿ ಸರಬರಾಜುದಾರರ ಅಂತರ್ಜಾಲದ ಮೂಲಕ ಸರಬರಾಜು ಮಾಡಲಾಗುತ್ತಿದೆ ಹಾಗೂ ಐಒಸಿ, ಬಿಪಿಸಿ ಮತ್ತು ಹೆಚ್‌ಪಿಸಿ ರವರು ದಿನಾಂಕ 14 2006 ರಿಂದ 31 1 2007 ರವರೆಗೆ ಅಡುಗೆ ಅನಿಲ ಸಿಲಿಂಡರ್‌ಗಳನ್ನು ಬೇಡಿಕೆಗನುಗುಣವಾಗಿ ಪೂರೈಸಲಾಗಿರುವ ವಿವರವು ಈ ಕೆಳಕಂಡಂತಿರುತ್ತದೆ

31/4

ತಿಂಗಳು /ವರ್ಷ	ಐ.ಓ.ಸಿ. (ಸಿಲಿಂಡರ್‌ಗಳು)		ಬಿ.ಪಿ.ಸಿ. (ಸಿಲಿಂಡರ್‌ಗಳು)		ಹೆಚ್.ಪಿ.ಸಿ. (ಸಿಲಿಂಡರ್‌ಗಳು)	
	ಬೇಡಿಕೆ	ಪೂರೈಕೆ	ಬೇಡಿಕೆ	ಪೂರೈಕೆ	ಬೇಡಿಕೆ	ಪೂರೈಕೆ
04/06	1319648	1150704	728873	730070	1251127	1251127
05/06	1177465	1285070	785211	789718	1304437	1304718
06/06	1333099	1353592	721690	790845	1306197	1310423
07/06	1370070	1354789	806338	804296	1328944	1328944
08/06	1385634	1399789	802817	812394	1335493	1319789
09/06	1411127	1441056	795775	751690	1315352	1335211
[illegible]	1460845	136 [illegible]5	799296	75 [illegible]5	1281338	1299085
11/06	1360563	146[illegible]338	809859	844155	1343521	1331338
12/06	1502606	1468169	813880	844859	1327465	1322465
01/07	1420211	1436690	810211	821127	1129085	1147465
ಒಟ್ಟು	13741268	13715423	7933451	7943380	12922959	12950565